ಹಂತಗಳಲ್ಲಿ ಪಡೆದು ಪ್ರಯೋಗಾಲಯದಲ್ಲಿ ಪರೀಕ್ಷಿಸಿ ಗುಣಮಟ್ಟ ದೃಢಪಡಿಸಿಕೊಳ್ಳಲಾಗುತ್ತಿದೆ.

ಮುದ್ದೇಬಿಹಾಳ ಬಸ್ ನಿಲ್ದಾಣ ನಿರ್ಮಾಣ ಕಾಮಗಾರಿಯು ಈಗಾಗಲೇ ಪ್ರಗತಿ ಸಾಧಿಸಿದ್ದು, ಕಾಮಗಾರಿಯನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಭೋವಿ ಜಾತಿಯ ದೃಢೀಕರಣ ಪತ್ರ

77 (68)

ಶ್ರೀ ಕುಮಾರಸ್ವಾಮಿ ಕೆ.ಜಿ (ಶಿವಮೊಗ್ಗ ಗ್ರಾಮಾಂತರ)

ಅ) ಅನುಸೂಚಿತ ಜಾತಿಗಳು ಸಂವಿಧಾನಿಕ ಆದೇಶ 1950ರಲ್ಲಿ ಭೋವಿ ಜಾತಿಯನ್ನು ಪರಿಶಿಷ್ಟ ಜಾತಿಯೆಂದು ಅಧಿಸೂಚಿಸಿದ್ದು; 1.11.56ರ ನಂತರ ಈ ಆದೇಶವನ್ನು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಿದ್ದು, ತದ ನಂತರ ಈ ಮೂಲ ಭೋವಿ ಜಾತಿಯ ಜೊತೆಗೆ ಓಡ್, ವಡ್ಡೆ,. ವಡ್ಡರ್ ಇತ್ಯಾದಿ ಉಪಜಾತಿಗಳನ್ನು 2002ರಲ್ಲಿ ಸೇರಿಸಿ ಕೇಂದ್ರ ಸರ್ಕಾರ ಅಧ್ಯಕ್ಷೀಯ ಆದೇಶ ಹೊರಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಆದೇಶದ ಪ್ರತಿಯೊಂದಿಗೆ ಮಾಹಿತಿ ನೀಡುವುದು)

ಆ) ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಮತ್ತು ಆಯುಕ್ತರುಗಳು ರಾಜ್ಯದ ಎಲ್ಲಾ ಜಿಲಾಧಿಕಾರಿ/ತಹಶೀಲ್ದಾರ್‌ಗಳಿಗೆ ಲಿಖಿತ ಸೂಚನೆ ನೀಡಿ ಮೂಲ ಭೋವಿ ಜಾತಿಯವರಿಗೆ ಭೋವಿ ಎಂದು 2002ರ ತಿದ್ದುಪಡಿ ಪ್ರಕಾರ ಓಡ್, ವಡ್ಡೆ, ವಡ್ಡರು ಇವರಿಗೆ ಸದರಿ ಉಪಜಾತಿಯ ಹೆಸರಿನಲ್ಲಿ ಜಾತಿ ದೃಢೀಕರಣ ಪತ್ರ ನೀಡಲು ತಿಳಿಸಿದ್ದರೂ, ಕೆಲವು ಜಿಲ್ಲೆಯ ಕೆಲವು ತಹಶೀಲ್ದಾರ್‌ಗಳು ಲಿಖಿತ ಸೂಚನೆಗಳನ್ನು ತಪ್ಪಾಗಿ ಅರ್ಥೈಸಿಕೊಂಡು ಮೂಲ ಭೋವಿ ಜಾತಿ ವರ್ಗಕ್ಕೆ ಜಾತಿ ದೃಢೀಕರಣ ಪತ್ರ ನೀಡಲು ನಿರಾಕರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ವಡ್ಡರ ಜಾತಿಗೆ ಸೇರದೇ ಇದ್ದರೂ, ಬೆಳಗಾವಿ/ಗುಲ್ಬರ್ಗಾ ವಿಭಾಗಗಳಲ್ಲಿ ಬಂಡಿ ವಡ್ಡರ್ ಮಣ್ಣು ವಡ್ಡರ್ ಗಿರಣಿ ವಡ್ಡರ್, ಕಲ್ಲು ವಡ್ಡರ್ ಎಂದು ಉಪನಾಮಗಳನ್ನು ಹೊಂದಿರುವ ವ್ಯಕ್ತಿಗಳಿಗೂ ಭೋವಿ ಎಂದು

ಸಂವಿಧಾನ ಬಾಹಿರವಾಗಿ ಭೋವಿ ಜಾತಿ ದೃಢೀಕರಣ ಪತ್ರ ಎಷ್ಟು ಪ್ರಕರಣಗಳಲ್ಲಿ ನೀಡಲಾಗಿದೆ? (ದಿನಾಂಕ 01.04.2009 ರಿಂದ 30.01.2013ರ ವರೆಗಿನ ವಿವರಗಳನ್ನು ಒದಗಿಸುವುದು)

ಶ್ರೀ ಎ.ನಾರಾಯಣಸ್ವಾಮಿ (ಸಮಾಜ ಕಲ್ಯಾಣ, ಬಂಧೀಖಾನೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿದೆ. ಈ ಕುರಿತು ಆದೇಶದ ಪ್ರತಿ ಲಗತ್ತಿಸಿದೆ.

ಆ) ಅಂತಹ ಯಾವುದೇ ಪ್ರಸ್ತಾವನೆಗಳು ಸರ್ಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ಇ) ಅಂತಹ ಯಾವುದೇ ಪ್ರಸ್ತಾವನೆಗಳು ಸರ್ಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ ಸ್ಥಾಪಿಸುವ ಬಗ್ಗೆ

112 (77)

ಶ್ರೀ ಸಿ.ಬಿ.ಸುರೇಶ್ ಬಾಬು (ಚಿಕ್ಕನಾಯಕನಹಳ್ಳಿ)

ಅ) ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕು, ಹುಳಿಯಾಳ ಹೋಬಳಿ ಕೇಂದ್ರದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಹುಳಿಯಾಳ ಹೋಬಳಿ ಕೇಂದ್ರದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣವನ್ನು ಈ ಸಾಲಿನಲ್ಲಿ ಮಂಜೂರು ಮಾಡಲಾಗುವುದೇ?

ಶ್ರೀ ಆರ್.ಅಶೋಕ (ಮಾನ್ಯ ಉಪಮುಖ್ಯಮಂತ್ರಿಗಳು ಗೃಹ ಮತ್ತು ಸಾರಿಗೆ)

ಅ) ಇಲ್ಲ.

ಆ) ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕು, ಹುಳಿಯಾಳ ಹೋಬಳಿ ಕೇಂದ್ರದ ಪ್ರದೇಶವು ರಾಷ್ಟ್ರೀಕೃತವಲ್ಲದ ವಲಯದಲ್ಲಿದ್ದು, ಇಲ್ಲಿನ ಬಹುತೇಕ ಸಾರಿಗೆ ಸೌಲಭ್ಯಗಳನ್ನು ಖಾಸಗಿಯವರಿಂದ ಒದಗಿಸಲಾಗುತ್ತಿದೆ.